## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ. 4/2018

**ಪಿರ್ಯಾದಿದಾರರು** – ರಾಜ್ಯದ ಪರವಾಗಿ
ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರು,
ಹಾವೇರಿ.

**– ವಿರುದ್ಧ –**

**ಆರೋಪಿತರು** – ಶಿವಾನಂದ ಬಸವಂತಪ್ಪ ಹಾದಿಮನಿ
ಹಾಗೂ ಇನ್ನೊಬ್ಬರು.

### :: *ದೋಷಾರೋಪಣೆ* ::

ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರಾದ ಶ್ರೀಮತಿ ಯಾದವ ವನಮಾಲಾ ಆನಂದರಾವ್, ಬಿ.ಕಾಂ., ಎಲ್‌ಎಲ್.ಬಿ(ಸ್ಪೆಷಲ್); ನಾನು ಈ ಕೆಳಕಂಡ ಆರೋಪಿತರಾದ -

1. ಶಿವಾನಂದ ತಂದೆ ಬಸವಂತಪ್ಪ ಹಾದಿಮನಿ,
   ವಯಾಃ 41 ವರ್ಷ, ಉಃ ಶಾಖಾಧಿಕಾರಿ,
   ಕೆ.ಇ.ಬಿ. ಕಛೇರಿ, ಬಂಕಾಪುರ ಶಾಖೆ,
   ವಾಸ ಸ್ಥಳಃ ಶಿಗ್ಗಾಂವ, ಹಾವೇರಿ ಜಿ.

2. ಶಿವಾನಂದ ತಂದೆ ನಿಂಗನಗೌಡ ಪಾಟೀಲ,
   ವಯಾಃ 43 ವರ್ಷ, ಉಃ ಲೈನಮನ್,
   ಕೆ.ಇ.ಬಿ. ಕಛೇರಿ, ಬಂಕಾಪುರ ಶಾಖೆ,
   ವಾಸ ಸ್ಥಳಃ ಹಾವೇರಿ, ಹಾವೇರಿ ಜಿ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಈ ಪ್ರಕರಣದ ಪಿರ್ಯಾದಿ/ಚಾಸಾ-1 ಬಸವರಾಜ ಮೆಳ್ಳಾಗಟ್ಟಿರವರು ಶಿಗ್ಗಾಂವ ತಾಲೂಕಿನ ಮೂಕಬಸರಿಕಟ್ಟಿ ಗ್ರಾಮದ ವಾಸಿಯಿದ್ದು, ಪಿರ್ಯಾದಿಯು ತನ್ನ ತಂದೆಯ ಹಿಸ್ಸೆಗೆ ಬರುವ ಜಮೀನಿಗೆ ಬೋರವೆಲ್ ಕೊರೆಸಿ, ಸದರಿ ಕೊಳವೆ ಬಾವಿ ವಿದ್ಯುತ್ ಸಂಪರ್ಕ ಪಡೆಯಲು ಸರ್ಕಾರದ ಅಕ್ರಮ-ಸಕ್ರಮ ಯೋಜನೆಯ ಅಡಿಯಲ್ಲಿ ಅರ್ಜಿ ಹಾಕಿ, ಹೆಸ್ಕಾಂ ಶಿಗ್ಗಾಂವಿಯ ಎ.ಇ.ಇ.ರವರು ದಿನಾಂಕಃ5/11/2014 ರಂದು ಪತ್ರದ ಮೂಲಕ ತಿಳಿಸಿದಂತೆ ದಿನಾಂಕಃ3/12/2014 ರಂದು

16,400/- ರೂಪಾಯಿಗಳನ್ನು ಹೆಸ್ಕಾಂ ಖಾತೆಗೆ ಹಣ ಜಮಾ ಮಾಡಿದ್ದರು. ನಂತರ ಜನೇವರಿ-2017 ರಲ್ಲಿ ವಿದ್ಯುತ್ ಸರಬರಾಜು ಕಂಟ್ರಾಕ್ಟರ್ ಟಿ.ಸಿ. ಮತ್ತು ವಿದ್ಯುತ್ ಲೈನ್‌ಗಳನ್ನು ಬೋರ್ ಗೆ ಹಾಕಿದ್ದು, ನಂತರ ಪಿರ್ಯಾದಿಯು ಬಂಕಾಪುರದ ಶಾಖಾಧಿಕಾರಿ/1 ನೇ ಆರೋಪಿಯಾದ ನಿಮಗೆ ಮತ್ತು ಆ ಭಾಗದ ಲೈನಮನ್/2 ನೇ ಆರೋಪಿಯಾದ ನಿಮಗೆ ವಿದ್ಯುತ್ ಸಂಪರ್ಕ ನೀಡುವಂತೆ ಕೋರಿದಾಗ, 2 ನೇ ಆರೋಪಿಯಾದ ನೀವು ಟಿ.ಸಿ.ಯನ್ನು ಚಾರ್ಜ್ ಮಾಡಿ ಬೋರವೆಲ್‌ಗೆ ಕನೆಕ್ಷನ್ ಕೊಡಲು 6,000/- ರೂಪಾಯಿ ಲಂಚ ಕೇಳಿ, ನಂತರ ರೂ.5,000/- ಅಕ್ರಮ ಹಣ(ಲಂಚ) ಕೇಳಿದ್ದು, ಅದಕ್ಕೆ ಪಿರ್ಯಾದಿಯು 2-3 ದಿನ ಬಿಟ್ಟು ಅಡ್ಜೆಸ್ಟ ಮಾಡಿಕೊಂಡು ಬರುತ್ತೇನೆ ಅಂತಾ ಹೇಳಿದ್ದು, ಪಿರ್ಯಾದಿಯು ದಿನಾಂಕ:7/8/2017 ರಂದು ಸೆಕ್ಷನ್ ಆಫೀಸ್, ಶಿಗ್ಗಾಂವಕ್ಕೆ ಹೋಗಿ ಅಲ್ಲಿ 1 ನೇ ಆರೋಪಿಯಾದ ನಿಮ್ಮನ್ನು ಭೇಟಿಯಾಗಿ ವಿದ್ಯುತ್ ಸಂಪರ್ಕ ಕೊಡಲು 2 ನೇ ಆರೋಪಿಯಾದ ನೀವು 6,000/- ರೂಪಾಯಿ ಲಂಚ ಕೇಳುತ್ತಿದ್ದಾರೆ ಅಂತಾ ಹೇಳಿದ್ದು, ಅದಕ್ಕೆ 1 ನೇ ಆರೋಪಿಯಾದ ನೀವು, 2 ನೇ ಆರೋಪಿಗೆ ಫೋನ್ ಮಾಡಿ 3,000/- ರೂಪಾಯಿ ಅಕ್ರಮ ಹಣ(ಲಂಚ) ತೆಗೆದುಕೊಂಡು ಕೆಲಸ ಮಾಡುವಂತೆ ಹೇಳಿದ್ದು, ಆ ಮೂಲಕ ಆರೋಪಿತರಾದ ನೀವಿಬ್ಬರು ಪಿ.ಸಿ. ಕಾಯ್ದೆ -1988 ರ ಕಲಂ.7 ರಡಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಮತ್ತು ಅದು ಈ ನ್ಯಾಯಾಲಯದ ಸಂಜ್ಞೆಯಲ್ಲಿದೆ.

ಕೊನೆಯದಾಗಿ, ದಿನಾಂಕ:09/08/2017 ರಂದು ಸಾಯುಂಕಾಲ 6.00 ಘಂಟೆ ಸುಮಾರಿಗೆ 2 ನೇ ಆರೋಪಿಯಾದ ನೀವು ನಿಮ್ಮ ಮನೆಯಲ್ಲಿ ಪಿರ್ಯಾದಿಯಿಂದ 4,000/- ರೂಪಾಯಿ ಅಕ್ರಮ ಹಣ(ಲಂಚ)ವನ್ನು ಕೇಳಿ ಪಡೆದುಕೊಂಡು, ನಂತರ ಕಛೇರಿಗೆ ಹೋದಾಗ ಕಛೇರಿಯ ಆವರಣದಲ್ಲಿ ಲೋಕಾಯುಕ್ತರ ಬಲೆಗೆ ಸಿಕ್ಕಿ ಬಿದ್ದು ಹಾಗೂ 1 ನೇ ಆರೋಪಿಯಾದ ನೀವು 2 ನೇ ಆರೋಪಿಗೆ ಲಂಚದ ಹಣ ಪಡೆಯುವಂತೆ ಹೇಳಿ, ನೀವಿಬ್ಬರು ನಿಮ್ಮ ಸರ್ಕಾರಿ ಹುದ್ದೆಯನ್ನು ದುರುಪಯೋಗಪಡಿಸಿಕೊಂಡು, ಆ ಮೂಲಕ ಆರೋಪಿತರಾದ ನೀವಿಬ್ಬರು ಪಿ.ಸಿ. ಕಾಯ್ದೆ -1988 ರ ಕಲಂ.13(1)(ಡಿ) ಸಹ ಕಲಂ.13(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿದ್ದೀರಿ ಮತ್ತು ಅವು ಈ ನ್ಯಾಯಾಲಯದ ಸಂಜ್ಞೆಯಲ್ಲಿವೆ.

ಈ ಮೇಲೆ ಹೇಳಿದ ದೋಷಾರೋಪಣೆಗಳಿಗಾಗಿ ಈ ನ್ಯಾಯಾಲಯದ ಮುಂದೆ ಅಧಿವಿಚಾರಣೆ ನಡೆಯಲಿದೆ.

**ಹಾವೇರಿ** **(ಯಾದವ ವನಮಾಲಾ ಎ.)**

**ದಿನಾಂಕ: 06-01-2022** **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**

**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ**